ಕಾವ್ಯಭಾಗ — ದುರ್ಯೋಧನ ವಿಲಾಪ

ಕವಿ:– ರನ್ನ

ಅ), ಒಂದು ವಾಕ್ಯದಲ್ಲಿ ಉತ್ತರಿಸಿ:

೧, ಕುರುಪತಿ ರಣರಂಗದಲ್ಲಿ ಏನನ್ನು ಮೆಟ್ಟಿ ನಡೆದನು?

ಕುರುಪತಿ ರಣರಂಗದಲ್ಲಿ ಮುರಿದು ಬಿದ್ದ ಆಯುಧಗಳನ್ನು ಮತ್ತು ಹೆಣಗಳನ್ನು ಮೆಟ್ಟಿ ನಡೆದನು.

೨, ರಣರಂಗದಲ್ಲಿ ಸಾಗುವಾಗ ದುರ್ಯೋಧನ ಯಾರ ನೆರವನ್ನು ಅವಲಂಬಿಸಿದ್ದನು?

ರಣರಂಗದಲ್ಲಿ ಸಾಗುವಾಗ ದುರ್ಯೋಧನನು ಸಂಜಯನ ನೆರವನ್ನು ಅವಲಂಬಿಸಿದ್ದನು.

೩, ಪಿನಾಕಪಾಣಿ ಎಂದರೆ ಯಾರು?

ಪಿನಾಕಪಾಣಿ ಎಂದರೆ ಶಿವ. ಪಿನಾಕ ಎಂದರೆ ತ್ರಿಶೂಲ, ಪಾಣಿ ಎಂದರೆ ಅದನ್ನು ಹಿಡಿದವನು, ತ್ರಿಶೂಲಧಾರಿ ಶಿವ ಎಂದರ್ಥ.

೪, ಚಕ್ರವ್ಯೂಹವನ್ನು ರಚಿಸಿದವರು ಯಾರು?

ಗುರುದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಿದರು.

೫, ತಂದೆಗೆ ಜಲಾಂಜಲಿಯನ್ನು ಯಾರು ಕೊಡಬೇಕು?

ತಂದೆಗೆ ಮಗನಾದವನು ಜಲಾಂಜಲಿಯನ್ನು ಕೊಡಬೇಕು.

೬, ದಿವ್ಯಜ್ಞಾನಿ ಎಂದು ಯಾರನ್ನು ಕರೆಯಲಾಗಿದೆ?

ಸಹದೇವನನ್ನು 'ದಿವ್ಯಜ್ಞಾನಿ' ಎಂದು ಕರೆಯಲಾಗಿದೆ.

೭, ಅಂಗಾಧಿಪತಿ ಯಾರು?

ಕರ್ಣನು ಅಂಗಾಧಿಪತಿ.

೮, ಹರಿಯು ಕರ್ಣನಿಂದ ಬೇಡಿದ್ದೇನು?

ಹರಿಯು ಕರ್ಣನಿಂದ ರಕ್ಷಾಕವಚವನ್ನು ಬೇಡಿ ಪಡೆದನು.

ಆ), ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:

೧, ರಣರಂಗದಲ್ಲಿ ಬಿದ್ದಿದ್ದ ಅಭಿಮನ್ಯುವಿನ ಕಳೇಬರ ಯಾವ ರೀತಿ ಕಾಣುತ್ತಿತ್ತು?

ದುರ್ಯೋಧನನು ಕಂಡಾಗ ಅಭಿಮನ್ಯುವಿನ ಶವ ರಣರಂಗದಲ್ಲಿ "ಅರೆ ತೆರೆದು ಅರೆ ಮುಚ್ಚಿದ್ದ ಕಣ್ಣರೆಪ್ಪೆಗಳು, ತುಂಡರಿಸಿ ಬಿದ್ದಿದ್ದ ಕೈಗಳು,ಕಚ್ಚಿದ ದವಡೆ, ಶತ್ರುಯಗಳ ಬಾಣ ಪ್ರಹಾರಕ್ಕೆ ಸಿಕ್ಕಿ ಜರ್ಜರಿತವಾಗಿದ್ದ ದೇಹವು ರಕ್ತದ ಸಮುದ್ರದಲ್ಲಿ ಅದ್ದಿದಂತೆ" ಬಿದ್ದಿತ್ತು.

೨, ದುರ್ಯೋಧನ ತನ್ನ ಮಗನ ಶವವನ್ನು ಕಂಡು ಹೇಗೆ ವ್ಯಥೆಪಡುತ್ತಾನೆ?

ದುರ್ಯೋಧನನು ತನ್ನ ಮಗ ಲಕ್ಷಣಕುಮಾರನ ಶವವನ್ನು ಕಂಡಾಗ ತೀವ್ರವಾಗಿ ವ್ಯಥೆಪಡುತಾನೆ. ಮಗ ತಂದೆಗೆ ತರ್ಪಣ ಬಿಡಬೇಕಾದುದು ಕ್ರಮ. ಆದರೆ ಇಲ್ಲಿ ಕ್ರಮ ಭಂಗವಾಗಿ ತಂದೆಯೇ ಮಗನಿಗೆ ತರ್ಪಣ ಕೊಡುವಂತಾಯಿತೆ ಎಂದು ದುಃಖಿಸುತ್ತಾನೆ.

೩, ದುಶ್ಯಾಸನನು ಅಣ್ಣನಿಗೆ ತೋರಿದ ವಿನಯಶೀಲತೆ ಯಾವುದು?

ದುಶ್ಯಾಸನನಿಗೆ ತನ್ನಣ್ಣ ದುರ್ಯೋಧನನೆಂದರೆ ತುಂಬಾ ಪ್ರೀತಿ–ಗೌರವ. ತಾಯಿಯ ಎದೆ ಹಾಲಿರಲಿ, ಸೋಮಾಮೃತವಿರಲಿ, ದಿವ್ಯ ಭೋಜನವಿರಲಿ ಯಾವುದನ್ನೂ ಅಣ್ಣ ಸ್ವೀಕರಿಸಿದ ಮೇಲೆ ತಾನು ಸ್ವೀಕರಿಸು ವಿನಯಶೀಲತೆಯನ್ನು ಅಣ್ಣನಿಗೆ ತೋರಿದ್ದನು.

೪, ಕರ್ಣನ ಜನ್ಮ ರಹಸ್ಯವನ್ನು ಯಾರು ಯಾರು ಅರಿತಿದ್ದರು?

ಕರ್ಣನ ಜನ್ಮರಹಸ್ಯವು ದುರ್ಯೋಧನನಿಗೆ ತಿಳಿದಿತ್ತು. ಅಲ್ಲದೆ ತಾಯಿಕುಂತಿ,ತಂದೆ ಸೂರ್ಯದೇವ, ಶ್ರೀಕೃಷ್ಣ ಮತ್ತು ದಿವ್ಯಜ್ಞಾನಿಯಾದ ಸಹದೇವರು ಅರಿತಿದ್ದರು.

೫, ದುರ್ಯೋಧನ ಕರ್ಣನ ದಾನಗುಣವನ್ನು ಹೇಗೆ ಪ್ರಶಂಸಿಸಿದ್ದಾನೆ?

ಕರ್ಣನು ಇಂದ್ರನಿಗೆ ತನ್ನ ಜನ್ಮದತ್ತ ಕವಚವನ್ನೇ ಕತ್ತರಿಸಿ ಕೊಟ್ಟಿರುತ್ತಾನೆ. ಅಲ್ಲದೆ ಕುಂತಿ ಬೇಡಿದಾಗ ತೊಟ್ಟಬಾಣವನ್ನು ಮರಳಿ ತೊಡೆನೆಂದು ಮಾತು ಕೊಟ್ಟಿರುತ್ತಾನೆ. ಇದನ್ನು ಸ್ಮರಿಸಿಕೊಂಡು ದುರ್ಯೋಧನ ಬೇಡಿದವರಿಗೆ ಎಲ್ಲವನ್ನೂ ಕೊಡುವ ದಾನಶೂರನಾದ ಕರ್ಣನಿಗೆ ಸಮಾನರು ಮತ್ತೊಬ್ಬರಿಲ್ಲವೆಂದು ಪ್ರಶಂಸಿಸುತ್ತಾನೆ.

ಇ), ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧, ದುರ್ಯೋಧನ ರಣರಂಗದಲ್ಲಿನಡೆದು ಬಂದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?

ದುರ್ಯೋಧನನು ಸಂಜಯನೊಡನೆ ರಣರಂಗದಲ್ಲಿ ನಡೆದು ಬರುವ ಚಿತ್ರಣವನ್ನು ಕವಿ ಈ ಕೆಳಗಿನಂತೆ ವಿವರಿಸಿದ್ದಾನೆ. ಕುರುಕ್ಷೇತ್ರ ಯುದ್ಧದಲ್ಲಿ ಲಕ್ಷಾಂತರ ಜೀವಹಾನಿಯಾದುದರಿಂದ ರಕ್ತದ ಸಮುದ್ರವೇ ಅಲ್ಲಿತ್ತು. ದುರ್ಯೋಧನನು ಮುರಿದು ನೆಲದಲ್ಲಿ ಹೂತ ಆಯುಧಗಳ ಮೇಲೆ ಕಾಲಿಟ್ಟ ಪರಿಣಾಮ ಪಾದಗಳು ನೊಂದವು. ಹೆಜ್ಜೆಯಿಡಲು ಜಾಗವಿಲ್ಲದೆ ಹೆಣಗಳನ್ನೇ ಮೆಟ್ಟಿ ನಡೆಯಬೇಕಿತ್ತು. ಪರ್ವತದಂತೆ ಬಿದ್ದಿದ್ದ ಆನೆಗಳ ಶವವನ್ನು ಏರಿ ಏರಿ, ರಕ್ತದ ಕಾಲುವೆಗಳನ್ನು ದಾಟಿ ದಾಟಿ ಮುಂದುವರಿಯಬೇಕಾದ ಸಂದರ್ಭವೊದಗಿತು. ನೀಲ ಬಳ್ಳಿಗಳಂತೆ ನೆಲದಲ್ಲಿ ಚಾಚಿಕೊಂಡಿದ್ದ ಆನೆಗಳ ಸೊಂಡಿಲು ಕಾಲಿಗೆ ತಡವರಿಸಿದ ಪರಿಣಾಮ ನೆಲಕ್ಕೆ ಬೀಳದಂತೆ ದುರ್ಯೋಧನನು ಸಂಜಯನ ಹೆಗಲಿನ ಆಸರೆಯನ್ನು ಅವಲಂಬಿಸಿ ಮುಂದೆ ನಡೆದನೆಂದು ರನ್ನ ಕವಿಯು ವರ್ಣಿಸಿದ್ದಾನೆ.

೨, ದ್ರೋಣರ ಕಳೇಬರವನ್ನು ಕಂಡು ದುರ್ಯೋಧನ ಹೇಗೆ ದುಃಖಿಸುತ್ತಾನೆ?

ಸ್ವಭಾವತಃ ದುಷ್ಟಪ್ರವೃತ್ತಿಯವನಾದ ಧೃಷ್ಟದ್ಯುಮ್ನನ ಕೈಗೆಸಿಕ್ಕು ತಲೆ ಕತ್ತರಿಸಿಕೊಂಡು ಬಿದ್ದಿದ್ದ ಭರದ್ವಾಜ ವಂಶಜರಾದ ದ್ರೋಣಾಚಾರ್ಯರ ಕಳೇಬರವನ್ನು ಕಂಡು ದುರ್ಯೋಧನನಿಗೆ ಅಪಾರವಾದ ಶೋಕವುಂಟಾಯಿತು. ಅವನು ದ್ರೋಣರ ಕಳೇಬರದೆದುರು ನಿಂತು "ಅಯ್ಯೋ, ನೀವು ಬಿಲ್ವಿದ್ಯಾಪಾರಂಗತರೆಂಬುದನ್ನು ಲೋಕವೇ ಬಲ್ಲುದು.ಧನುರ್ವಿದ್ಯೆಯಲ್ಲಿ ನಿಮಗಿರುವ ಪ್ರಾವೀಣ್ಯತೆಗೆ ಅರ್ಜುನ ಮಾತ್ರವಲ್ಲ,ಸಾಕ್ಷಾತ್ ಶಿವನೂ ಎದುರಿಸಿ ನಿಮ್ಮನ್ನು ಗೆಲ್ಲಲಾರ. ನೀವು ವೀರಾವೇಶದಿಂದ ಹೋರಾಡಿ,ಪಾಂಡವರನ್ನು ಜಯಿಸದೆ ಉದಾಸೀನ ತೋರಿದಿರೇಂದು ನಾನು ಯೋಚಿಸುವುದಿಲ್ಲ. ನನ್ನ ಹಣೆಬರಹದಿಂದಾಗಿ ನೀವು ಜಯಿಸಲಿಲ್ಲವಷ್ಟೇ. ನಿಮ್ಮಂತಹ ಪರಾಕ್ರಮಿಗೆ ಸಾವು ಹೇಗೆ ಸಂಭವಿಸಿತೋ ಕಾರಣ ತಿಳಿಯದಾಗಿದೆ" ಎಂದು ಪರಿಪರಿಯಾಗಿ ದುಃಖಿಸಿದನು.

೩, ಅಭಿಮನ್ಯುವಿನ ಶೌರ್ಯ-ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ?

ಅಭಿಮನ್ಯುವು ಅರ್ಜುನನ ಮಗ, ದುರ್ಯೋಧನನಿಗೆ ಶತ್ರು ಪಕ್ಷದವನು.ಆದರೂ ದುರ್ಯೋಧನ ಅಭಿಮನ್ಯುವಿನ ಶವವನ್ನು ಕಂಡಾಗ ಅವನ ಶೌರ್ಯ-ಸಾಹಸ ಗಳನ್ನು ಮನದುಂಬಿ ಹೊಗಳುತ್ತಾನೆ.ದ್ರೋಣರು ಚಕ್ರವ್ಯೂಹವನ್ನು ರಚಿಸಿದಾಗ ಇತರರಿಗೆ ಅದನ್ನು ಭೇದಿಸಲು ಸಾಧ್ಯವಾಗಲಿಲ್ಲ. ಆಗ ಚಿಕ್ಕವಯಸ್ಸಿನ ಅಭಿಮನ್ಯು

ಚಕ್ರವ್ಯೂಹವನ್ನು ಭೇದಿಸಿ ಹಲವಾರು ರಾಜರನ್ನು ಮಣ್ಣಮುಕ್ಕಿಸಿದ. ಆದ್ದರಿಂದ ಅವನಿಗೆ ಸಮಾನನಾದ ವೀರ ಮತ್ತೊಬ್ಬನಿಲ್ಲವೆಂದು ದುರ್ಯೋಧನ ಕೊಂಡಾಡುತ್ತಾ ನೆ. ಬಲ ಮತ್ತು ಪರಾಕ್ರಮಗಳಲ್ಲಿ ಅಭಿಮನ್ಯುವಿಗೆ ಸರಿಸಾಟಿಯಾದವರು ಮತ್ತೊಬ್ಬರಿಲ್ಲ. ಅವನ ಸಾಹಸದಲ್ಲಿ ಒಂದಂಶವಾದರೂ ತನ್ನಲ್ಲಿದ್ದರೆ ಅಭಿಮನ್ಯುವಿ ನಂತಹ ವೀರ ಮರಣ ತನಗೂ ಬರಲೆಂದು ದುರ್ಯೋಧನ ಪ್ರಾರ್ಥಿಸುತ್ತಾನೆ. ಇದು ಅಭಿಮನ್ಯುವಿನ ಸಾಹಸ–ಪರಾಕ್ರಮಗಳಿಗೆ ದುರ್ಯೋಧನ ತೋರಿದ ಗೌರವವೆ

ನ್ನಬಹುದು.

೪, ದುರ್ಯೋದನ ದುಶ್ಯಾಸನನನ್ನು ಕಂಡು ವ್ಯಕ್ತಪಡಿಸಿದ ಭಾವನೆಗಳಾವುವು?

ದುಶ್ಯಾಸನನನ್ನು ಕಂಡರೆ ದುರ್ಯೋಧನನಿಗೆ ತುಂಬಾ ಪ್ರೀತಿಯಿತ್ತು. ಅವರಿಬ್ಬರೂ ಅಣ್ಣ–ತಮ್ಮಂದಿರಿಗಿಂತಲೂ ಹೆಚ್ಚಾಗಿ ಸ್ನೇಹಿತರಂತಿದ್ದರು. ಚಿಕ್ಕಂದಿನಿಂದ ವಿನಯ ವಂತನಾಗಿದ್ದ,ತನಗಾಗಿ ಪ್ರಾಣ ತೊರೆದ ದುಶ್ಯಾಸನನ ಶವವನ್ನು ಕಂಡು ದುರ್ಯೋಧನ ತುಂಬಾ ಸಂಕಟಪಡುತ್ತಾನೆ. ತನ್ನ ತಮ್ಮ ದುಶ್ಯಾಸನನನ್ನು ಕೊಂದವನನ್ನು ಇನ್ನೂ ಜೀವಂತವಾಗಿ ಉಳಿಸಿರುವೆನಲ್ಲಾ ಎಂದು ತನ್ನ ಬಗ್ಗೆ ತಾನೇ ನಾಚಿಕೆಪಡುತ್ತಾನೆ. ತಾಯಿಯ ಎದೆಹಾಲು ಕುಡಿದದ್ದು, ಸೋಮಾಮೃತ–ದಿವ್ಯ ಭೋಜನಗಳ ನ್ನು ಸೇವಿಸಿದ್ದು ತಾನೇ ಮೊದಲು. ಆನಂತರವಷ್ಟೇ ದುಶ್ಯಾಸನ ಸೇವಿಸಿದ್ದು. ಚಿಕ್ಕಂದಿನಿಂದ ಎಂದೂ ಈ ಕ್ರಮ ತಪ್ಪಿಸಿರಲಿಲ್ಲ. ಸಾವಿನಲ್ಲೂ ಹಿರಿಯನಾದ ತಾನು ಸತ್ತ ಬಳಿಕವಷ್ಟೇ ಕಿರಿಯನಾದ ದುಶ್ಯಾಸನ ಸಾಯಬೇಕಿತ್ತು. ಇಲ್ಲೇಕೆ ನನ್ನ ತಮ್ಮ ಕ್ರಮ ಭಂಗ ಮಾಡಿದ? ಎಂದೆಲ್ಲಾ ಗೋಳಾಡುವ ದುರ್ಯೋಧನನಿಗೆ ತುಂಬಾ ಹೊತ್ತು ನಿಂತು ತನ್ನ ತಮ್ಮನ ಶವವನ್ನು ನೋಡಲು ಸಾಧ್ಯವಾಗಲಿಲ್ಲ

೫, ಕರ್ಣನ ಉದಾತ್ತ ಗುಣವನ್ನು ದುರ್ಯೋಧನ ಹೇಗೆ ಕೊಂಡಾಡಿದ್ದಾನೆ?

ದುರ್ಯೋಧನ ಕರ್ಣನ ಗುಣವಿಶೇಷಗಳನ್ನು ಬಹುವಾಗಿ ಕೊಂಡಾಡಿದ್ದಾನೆ. ಕರ್ಣನು ಸತ್ಯ,ತ್ಯಾಗ ಮತ್ತು ಪರಾಕ್ರಮದಲ್ಲಿ ಮೊತ್ತಮೊದಲಿಗನೆಂದು ದುರ್ಯೋಧನ

ಸ್ಮರಿಸುತ್ತಾನೆ. ಮಾತ್ರವಲ್ಲ ಕರ್ಣನಿರುವ ರಾಜ್ಯದಲ್ಲಿ ಸುಳ್ಳಿಗಾಗಲಿ, ಲೋಭಕ್ಕಾಗಲಿ,ಭಯಕ್ಕಾಗಲಿ ಸ್ಥಳವಿಲ್ಲವೆಂದಿದ್ದಾನೆ. ಇಂದ್ರನು ಬಂದು ಕರ್ಣನ ಜನ್ಮದತ್ತ ರಕ್ಷಾಕವಚವನ್ನು ದಾನವಾಗಿ ಬೇಡಿದಾಗ ಅದನ್ನು ಕತ್ತರಿಸಿಕೊಟ್ಟ ದಾನಶೂರ ಕರ್ಣ. ಅದೇ ರೀತಿ ಕುಂತಿಯು ತೊಟ್ಟ ಬಾಣವನ್ನು ತೊಡೆನೆಂಬ ಭಾಷೆ ಕೇಳಿದಾಗ

ಹಿಂದು ಮುಂದು ನೋಡದೆ ನೀಡಿದವನು. ಪರಾಕ್ರಮದಲ್ಲಾಗಲೀ, ದಾನಗುಣದಲ್ಲಾಗಲಿ ಕರ್ಣನಿಗೆ ಸರಿಸಮಾನನಾದವನು ಮತ್ತೊಬ್ಬನಿಲ್ಲ ಎಂಬುದು ದುರ್ಯೋಧನ

ನ ಅಭಿಪ್ರಾಯವಾಗಿದೆ. ಕರ್ಣನಂತಹ ಸ್ನೇಹಿತನಲ್ಲದೆ ತನಗೆ ರಾಜ್ಯವಾಗಲಿ,ಪಟ್ಟವಾಗಲಿ,ಬೆಳ್ಗೊಡೆಯಾಗಲಿ ಅರ್ಥಹೀನ. ಬದುಕಿಗೆ ಕರ್ಣನಂತಹ ಉದಾತ್ತ ಗುಣಗಳ ಗಣಿಯನ್ನು ಹೊಂದಿರಬೇಕೆಂಬ ಆಶಯವನ್ನು ದುರ್ಯೋಧನ ವ್ಯಕ್ತಪಡಿಸುತ್ತಾನೆ.

ಈ), ಸಂದರ್ಭ ಸೂಚಿಸಿ ವಿವರಿಸಿ:-

೧, "ಗಾಂಡಿವಿಯಲ್ತು ಪಿನಾಕಪಾಣಿಯುಂ ನೆರೆಯನ್."

ರನ್ನ ಕವಿ ರಚಿಸಿರುವ 'ಗದಾಯುದ್ಧ'ದಿಂದ ಆಯ್ದ 'ದುರ್ಯೋಧನ ವಿಲಾಪ' ಎಂಬ ಕಾವ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

ಭೀಷ್ಮರನ್ನು ಭೇಟಿಮಾಡಲು ರಣಾಂಗವನ್ನು ಹಾದುಬರುತ್ತಿದ್ದ ಸಂದರ್ಭದಲ್ಲಿ ದರ್ಯೋಧನನಿಗೆ ದ್ರೋಣರ ಮೃತಶರೀರ ಸಿಗುತ್ತದೆ. ಗುರುದ್ರೋಣರಿಗೆ ಒದಗಿದ ಸಾವನ್ನು ನೆನೆದು ರೋದಿಸುವ ದುರ್ಯೋಧನನು ದೋಣರ ಬಿಲ್ಲುವಿದ್ಯಾಪರಿಣತಿಯನ್ನು ಸ್ಮರಿಸುತ್ತಾ"ಬಿಲ್ಲು ವಿದ್ಯೆಯ ನಿಮ್ಮ ಪರಿಣತಿ ಲೋಕಕ್ಕೆ ತಿಳಿದಿದೆ ನಿಮ್ಮನ್ನು ಅರ್ಜುನ ಮಾತ್ರವಲ್ಲ, ಸ್ವತಃ ಪರಶಿವನೂ ಎದುರಿಸಲು ಸಾಧ್ಯವಾಗುತಿರಲಿಲ್ಲ" ಎಂದು ಹೇಳಿವನು. ತನ್ನ ಹಣೇಬರಹ ಕಾರಣದಿಂದಾಗಿ ದ್ರೋಣರು ಜಯಿಸಲಾಗಲಿಲ್ಲವೆಂದು ದುರ್ಯೋಧನನು ಚಿಂತಿಸಿದನು.

೨, "ನಿನ್ನೊರೆಗೆ ದೊರೆಗೆ ಗಂಡರುಮೊಳರೇ."

ರನ್ನ ಕವಿ ರಚಿಸಿರುವ 'ಗದಾಯುದ್ಧ'ದಿಂದ ಆಯ್ದ 'ದುರ್ಯೋಧನ ವಿಲಾಪ' ಎಂಬ ಕಾವ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

ದುರ್ಯೋಧನ ಸಂಜಯನ ಜೊತೆಗೂಡಿ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಬರುವಾಗ ಅರ್ಜುನನ ಮಗ ಅಭಿಮನ್ಯುವಿನ ಶವ ಎದಿರಾಗುತ್ತದೆ. ದ್ರೋಣರು ರಚಿಸಿದ ಚಕ್ರವ್ಯೂಹವನ್ನು ಭೇದಿಸಿ, ಹಲವಾರು ರಾಜರನ್ನು ಮಣಿಸಿದ ಮಹಾಪರಾಕ್ರಮಿಯಾದ ಅಭಿಮನ್ಯುವಿನ ಪರಮಸಾಹಸದ ಬಗ್ಗೆ ದುಯೋಧನನಿಗೆ ಹೃದಯ ತುಂಬಿ ಬರುತ್ತದೆ. ಅಭಿಮನ್ಯುವಿನ ಶೌರ್ಯವನ್ನು ಸ್ಮರಿಸುತ್ತಾ ದುರ್ಯೋಧನನು"ನಿನಗೆ ಸರಿ ಸಮಾನರಾದ ಕಲಿಗಳು ಬೇರೆ ಯಾರಿದ್ದಾರೆ?" ಎಂಬ ಈ ಮೇಲಿನ ಮಾತನ್ನಾಡುತ್ತಾನೆ. ಅಭಿಮನ್ಯು ಶತ್ರು ಪಕ್ಷದವನಾದರೂ ಅವನ ಸಾಹಸವನ್ನು ಮನಃಪೂರ್ವಕವಾಗಿ ಮೆಚ್ಚುವ ದುಯೋಧನನ ದೊಡ್ಡತನವನ್ನು ಕವಿ ಈ ಸಂದರ್ಭದಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ.

೩, "ನೀಂ ಕ್ರಮವಿಪರ್ಯಯಂ ಮಾಡುವುದೇ"

ರನ್ನ ಕವಿ ರಚಿಸಿರುವ 'ಗದಾಯುದ್ಧ'ದಿಂದ ಆಯ್ದ 'ದುರ್ಯೋಧನ ವಿಲಾಪ' ಎಂಬ ಕಾವ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

ರಣರಂಗದಲ್ಲಿ ಬರುತ್ತಿರುವ ದುರ್ಯೋಧನ ತನ್ನ ಮಗನಾದ ಲಕ್ಷಣಕುಮಾರನ ಶವವನ್ನು ಕಂಡ ಸಂದರ್ಭವಿದು. ಬಾಳಿ ಬದುಕಬೇಕಾಗಿದ್ದ ತನ್ನ ಕರುಳಿನ ಕುಡಿ ಕಮರಿ ಹೋಗಿರುವುದನ್ನು ಕಂಡು ದುರ್ಯೋಧನನ ಕರುಳು ಕತ್ತರಿಸಿದಂತಾಗುತ್ತದೆ. ಅವನು ಮಗನ ಶವದ ಮುಂದೆ ನಿಂತು "ತಂದೆಯಾದವನಿಗೆ ಮಗನು ಎಳ್ಳು-ನೀರಿನ ತರ್ಪಣಕೊಡುವುದು ಸರಿಯಾದ ಕ್ರಮ. ಆದರೆ ತಂದೆಯಾದ ನಾನೇ ನಿನಗೆ ತರ್ಪಣವನ್ನು ಕೊಡುವ ಸಂದರ್ಭವೊದಗಿದೆ. ನನಗಿಂತ ಮೊದಲು ಸಾವನ್ನಪ್ಪಿ ಕ್ರಮ ವ್ಯತ್ಯಯ ಮಾಡಿದೆಯೇಕೆ"? ಎಂದು ದುರ್ಯೋಧನ ಪ್ರಲಾಪಿಸುವ ಸಂದರ್ಭವಿದಾಗಿದೆ.

೪, "ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ"

ರನ್ನ ಕವಿ ರಚಿಸಿರುವ 'ಗದಾಯುದ್ಧ'ದಿಂದ ಆಯ್ದ 'ದುರ್ಯೋಧನ ವಿಲಾಪ' ಎಂಬ ಕಾವ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

ದುಶ್ಯಾಸನನಿಗೆ ದುರ್ಯೋಧನನೆಂದರೆ ಅಪರಿಮಿತ ಪ್ರೀತಿ. ಜಗತ್ತಿನ ಎಲ್ಲ ಸುಖಗಳೂ ತನ್ನಣ್ಣನಾದ ದುರ್ಯೋಧನನಿಗಾಗಿ ಇರಲೆಂಬ ಆಶಯವುಳ್ಳವನು. ಅಣ್ಣನ ಮಾತನ್ನು ಮರುಮಾತನಾಡದೆ ಪಾಲಿಸಿದವನು. ಇಂತಹ ಪ್ರೀತಿಯ ತಮ್ಮನ ಶವವನ್ನು ಕಂಡಾಗ ದುರ್ಯೋಧನನಿಗೆ ಭಾತೃವಾತ್ಸಲ್ಯ ಉಕ್ಕಿ ಹರಿಯುತ್ತದೆ. ತನಗಿಂತ ಮೊದಲೇ ಸತ್ತಿರುವ ದುಶ್ಯಾಸನನನ್ನು ಕುರಿತು ಅವನು " ತಾಯ ಹಾಲನ್ನು ನಾನು ಮೊದಲು ಕುಡಿದೆ, ಆಮೇಲೆ ನೀನು ಕುಡಿದದ್ದು. ಅಂತೆಯೇ ಸೋಮಾಮೃತವಿರಲಿ, ಭಕ್ಷ್ಯಭೋಜನಗಳಿರಲಿ ನಾನು ಸೇವಿಸಿದ ಬಳಿಕವೇ ನೀನು ಸೇವಿಸುವ ಕ್ರಮ ಚಿಕ್ಕಂದಿನಿಂದಲೂ ನಡೆದು ಬಂದಿತ್ತು. ಸಾವಿನಲ್ಲೂ ನಾನು ಮೊದಲಿಗನಾಗಬೇಕಿತ್ತಲ್ಲವೇ? ನೀನೇಕೆ ಸರದಿ ತಪ್ಪಿ ಮೊದಲು ಸಾವನ್ನಪ್ಪಿದೆ?". ಎಂದ ಶೋಕಿಸುವ ಸಂದರ್ಭ ಇದಾಗಿದೆ.

೫, "ಈಗಳ್ ನೀನುಮಗಲ್ದೆತ್ತವೋದೆಯಂಗಾಧಿಪತೀ."

ರನ್ನ ಕವಿ ರಚಿಸಿರುವ 'ಗದಾಯುದ್ಧ'ದಿಂದ ಆಯ್ದ 'ದುರ್ಯೋಧನ ವಿಲಾಪ' ಎಂಬ ಕಾವ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

ಕರ್ಣ ಮತ್ತು ದುರ್ಯೋಧನರದು 'ಒಂದೇಪ್ರಾಣ, ಎರಡುಜೀವ' ಎನ್ನುವಂತಹ ಸ್ನೇಹ. ಕರ್ಣನ ಶವವನ್ನು ಕಂಡ ದುರ್ಯೋಧನನು "ನಾನು, ದುಶ್ಯಾಸನ ಮತ್ತು

ನೀನು ಮೂವರು ಅಗಾಧ ಮೈತ್ರಿಯಿಂದ ಇದ್ದೆವು. ದುಶ್ಯಾಸನ ನಮ್ಮನ್ನು ಅಗಲಿ ದೂರಾದ ನಂತರ ನಾವಿಬ್ಬರೇ ಉಳಿದೆವು. ಈಗ ನೀನೂ ನನ್ನನ್ನು ಅಗಲಿ ಎಲ್ಲಿಗೆ ಹೋದೆ ಕರ್ಣನೇ?" ಎಂದು ಶೋಕಿಸುವ ಸಂದರ್ಭವಿದಾಗಿದೆ. ಪ್ರಾಣಸೇಹಿತನಾದ ಕರ್ಣನ ಸಾವನ್ನು ಸಹಿಸಲು ದುರ್ಯೋಧನನಿಗೆ ತುಂಬಾ ಕಷ್ಟವೆನಿಸಿತು

೬, "ಆನರಿವೆಂ ಪೃಥೆಯರಿವಳ್."

ರನ್ನ ಕವಿ ರಚಿಸಿರುವ 'ಗದಾಯುದ್ಧ'ದಿಂದ ಆಯ್ದು 'ದುರ್ಯೋಧನ ವಿಲಾಪ' ಎಂಬ ಕಾವ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

ಕರ್ಣನಿಗೆ ತಾನು ಕುಂತಿಯ ಮಗನೆಂಬ ಅರಿವಿರಲಿಲ್ಲ. ಆದರೆ ದುರ್ಯೋಧನನಿಗೆ ಅದರ ಅರಿವತ್ತು. ಕರ್ಣನ ಮರಣದ ನಂತರ ದುರ್ಯೋಧನ ಈಗ ಆ ಸಂಗತಿಯನ್ನು ಸ್ಮರಿಸಿಕೊಂಡು "ನೀನು ಯಾರ ಮಗನೆಂಬ ಅರಿವು ಕುಂತಿಗಿತ್ತು. ನನಗೂ ಈ ಸಂಗತಿ ತಿಳಿದಿತ್ತು. ನಿನ್ನ ತಂದೆಯಾದ ಸೂರ್ಯ, ಶ್ರೀಕೃಷ್ಣ ಮತ್ತು ದಿವ್ಯಜ್ಞಾನಿಯಾದ ಸಹದೇವನಿಗೂ ಈ ಸಂಗತಿ ತಿಳಿದಿತೆಂದು" ದುರ್ಯೋಧನ ನುಡಿಯುವ ಸಂದರ್ಭವಿದಾಗಿದೆ.

ಕನ್ನಡ ಮಾತೃ ಭಾಷೆ

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ ಕ್ಷ ತ್ರ ಜ್ಞ

ಕನ್ನಡ ಮಾತೃ ಭಾಷೆ

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ ಕ್ಷ ತ್ರ ಜ್ಞ